ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–65

ಮೈಲಪ್ಪನಹಳ್ಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: 16.12.16

ಈ ವಾರದ ಮುನ್ಸೂಚನೆ (15.12.16 to 19.12.16 ವರೆಗೆ)

ನಿಯತಾಂಕಗಳು	15.12.16	16.12.16	17.12.16	18.12.16	19.12.16
ಮಳೆ (ಮಿ ಮಿ)	0	0	0	0	0
ಗರಿಷ್ಠ ಉಷ್ಣಾಂಶ(ಡಿ.ಸೆ.)	26	26	26	26	26
ಕನಿಷ್ಠ ಉಷ್ಣಾಂಶ (ಡಿ.ಸೆ.)	17	17	15	15	17
ಮೋಡ (ಪ್ರಮಾಣ)	3	1	0	0	4
ಅರ್ದ್ರತೆ ೭.೨೦ ಬೆ (ಶೇ)	97	98	95	93	91
ಅರ್ದ್ರತೆ ೨.೨೦ ಮ (ಶೇ)	59	49	51	47	45
ಗಾಳಿಯ ವೇಗ (ಕಿ.ಮಿ/ಗಂಟೆಗೆ)	16	14	14	13	15
ಗಾಳಿಯ ದಿಕ್ಕು (ಡಿಗ್ರಿ)	111	113	69	68	68

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ **ಮೈಲಪ್ಪನಹಳ್ಳಿ** ಹಾಗೂ ಸುತ್ತಮುತ್ತ ಮುಂದಿನ ಐದು ದಿನಗಳು ಮೋಡ ಕವಿದ ವಾತಾವರಣವಿರಲಿದ್ದು, ಹಗುರ ಮಳೆಯಾಗುವ ಸಂಭವವಿದೆ. ದಿನದ ಗರಿಷ್ಠ ಉಷ್ಣಾಂಶವು 26°C ಮತ್ತು ಕನಿಷ್ಠ 15-17°C ಇರಲಿದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ 91-98 % ಇದ್ದು, ಮಧ್ಯಾಹ್ನ 45-59 % ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ 13-16 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ಮುಂದಿನ ಐದು ದಿನಗಳು ಬಹುತೇಕ ಮೋಡ ಕವಿದ ವಾತಾವರಣ ಇರಲಿದ್ದು, ಹಗುರವಾದ ಮಳೆಯ ನಿರೀಕ್ಷೆಯಿದೆ.
- ಬೆಳೆಗಳ ಕಟಾವನ್ನು ಮುಂದೂಡಬೇಕು.
- ಕೃಷಿ ಹೊಂಡಗಳಲ್ಲಿ, ತಡೆ ಅಣೆಕಟ್ಟುಗಳಲ್ಲಿ, ನಾಲಾಬದು ಅಥವಾ ಕೊಳವೆ ಬಾವಿಗಳಲ್ಲಿನ ನೀರನ್ನು ಬೆಳೆಗಳಿಗೆ ಒಂದೆರಡು ಸಾರಿ ಒದಗಿಸಿ ಜೀವ ಉಳಿಯುವಂತೆ ಮಾಡುವುದು.
- ದ್ರಾಕ್ಷಿಯಲ್ಲಿ ಗೊಂಚಲಿನ ಗಾತ್ರ ಮತ್ತು ಹಣ್ಣುಗಳ ಗುಣಮಟ್ಟವನ್ನು ಹೆಚ್ಚಿಸಲು ಗೊಂಚಲಿನಲ್ಲಿ ಪೂರ್ತಿ ಹೂವು ಅರಳುವ ಹಂತದಲ್ಲಿ 20 ಮೀ. ಗ್ರಾಂ ಪ್ರತಿ ಲೀಟರ್ ನೀರಿಗೆ ಮತ್ತು ನಂತರ ಕಾಯಿ ಕಚ್ಚುವ ಹಂತದಲ್ಲಿ (50 ಮೀ. ಗ್ರಾಂ ಪ್ರತಿ ಲೀಟರ್ ನೀರಿಗೆ) ಜಿಬ್ಬೆರ್ಲಿಕ್ ಆಮ್ಲದ ದ್ರಾವಣದಲ್ಲಿ ಅದ್ದುವುದು ಸೂಕ್ತ.
- **ಹೈನುಗಾರಿಕೆ** : ಜಾನುವಾರು, ರೇಷ್ಮೆ ಹಾಗೂ ಕೋಳಿ ಸಾಕಣೆ ಕೊಠಡಿಯ ಉಷ್ಣಾಂಶದ ಸ್ಥಿರತೆಯನ್ನು ಕಾಪಾಡಿಕೊಳ್ಳುವುದು. ಕೊಟ್ಟಿಗೆಯನ್ನು ಶುಚಿಯಾಗಿ ಇಟ್ಟುಕೊಳ್ಳುವುದು ಮತ್ತು ಜಾನುವಾರುಗಳನ್ನು ಚಳಿಗಾಳಿಯಿಂದ ರಕ್ಷಿಸಬೇಕು. ಹಾಲು ಕೊಡುವ ಪ್ರಾಣಿಗಳಿಗೆ ಅವು ಕೊಡುವ ಹಾಲಿನ ಆದಾರದ ಮೇಲೆ ಆಹಾರವನ್ನು ಕೊಡಬೇಕು.
- ಮಾವಿನ ಮರಗಳ ಬುಡದ ಪಾತಿಗಳನ್ನು ಸ್ವಚ್ಚಗೊಳಿಸಿ ಲಾಂಟಾನ ಮುಂತಾದ ಕಳೆ ಸಸ್ಯಗಳಿದ್ದರೆ ಬೇರು ಸಮೇತ ಕಿತ್ತು ತೆಗೆಯಬೇಕು.

ಬಿತ್ತನೆ ಮಾಡಬೇಕಾದ ಬೆಳೆಗಳು: ತೇವಾಂಶದ ಆಧಾರದ ಮೇಲೆ ಬಿತ್ತನೆ ಮಾಡಬೇಕು

ರಾಗಿ(ನಾಟಿ ಮಾಡುವುದು): ಇಂಡಾಫ್–7,9,15, ಕೆ.ಎಂ.ಆರ್–301 ,**ಹುರುಳಿ**: ಕೆ.ಬಿ.ಹೆಚ್–1(ಬಿ.ಜಿ.ಎಂ–1), ಪಿ. ಹೆಚ್.ಜಿ–9, **ಅಲಸಂದೆ** : ಕೆ,ಬಿ.ಸಿ–1,2, ಐಟಿ 98456–1 ,**ಅವರೆ**: ಹೆಚ್.ಎ–4, 3, **ಸೂರ್ಯಕಾಂತಿ** : ಕೆ.ಬಿ.ಎಸ್.ಹೆಚ್–41,42,44 , ಮಾರ್ಡೆನ್ , **ಹಿಂಗಾರು ಜೋಳ**: ಎಮ್ 15–1 , 35–1, ಮೂಗುತಿ (5–4–1) ಮತ್ತು ಸಿ .ಹೆಚ್.ಎಸ್–10(ಹೈಬ್ರಿಡ್), **ಮೇವಿನ ಜೋಳ** : ಎಂ.ಪಿ.ಚಾರಿ, ಪೂಸಾಚಾರಿ, ಜೆ.ಎಸ್–3, ಎಸ್–1049

ಸಸ್ಯ ಸಂರಕ್ಷಣೆ:

- ಹಗುರವಾದ ಮಳೆಯ ನಿರೀಕ್ಷೆ ಇರುವುದರಿಂದ ಔಷಧಿ ಸಿಂಪಡಣೆ ಮುಂದೂಡಬೇಕು.

ನೋಡಲ್ ಅಧಿಕಾರಿ
ಕೃಷಿ ಹವಾಮಾನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು